# ಅನಿಕೇತನ ANIKETANA

ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

Dr. Manmohan Singh Bengaluru City University

ಸಂಪುಟ 01 | ಸಂಚಿಕೆ 06 | ಬೆಂಗಳೂರು | April 2026 | ಪುಟ 01

Monthly Campus Newsletter by the Department of Mass Communication and Journalism. (For Private Circulation Only)


## ಸಮಗ್ರ ಪ್ರಗತಿಗೆ ಸ್ತ್ರೀ ಸಮಾನತೆ ಅತ್ಯಗತ್ಯ: ವಿಜ್ಞಾನಿ ಪದ್ಮಶ್ರೀ ಶುಭ ಅಯ್ಯಂಗಾರ್ ಅಭಿಮತ

ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಸ್ತ್ರೀ ಸಮಾನತೆಯ ಗುರಿ ಸಾಧನೆಯು ಅತಿಮುಖ್ಯವೆಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹಿರಿಯ ವಿಜ್ಞಾನಿ ಡಾ. ಶುಭ ವಿ. ಅಯ್ಯಂಗಾರ್ ಪ್ರತಿಪಾದಿಸಿದ್ದಾರೆ. ಸೆಂಟ್ರಲ್ ಕಾಲೇಜ್ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ ಮಾರ್ಚ್ 18ರಂದು ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಬಾಹ್ಯಾಕಾಶ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ದೇಶೀಯ ತಂತ್ರಜ್ಞಾನ ಅಳವಡಿಕೆಯ ಪ್ರಯತ್ನದ ಭಾಗವಾಗಿ ವಿಮಾನಗಳ ಟೇಕ್ ಆಫ್ ಮತ್ತು ಲ್ಯಾಂಡಿಂಗ್ ನಿರ್ವಹಣೆಗಾಗಿ 'ದೃಷ್ಟಿ' ಯೋಜನೆ ರೂಪಿಸಿದ ತಮ್ಮ ಅನುಭವವನ್ನು ಅವರು ಪ್ರಾತ್ಯಕ್ಷಿಕೆಗಳ ಮೂಲಕ ವಿವರಿಸಿದರು. ಸೆಂಟ್ರಲ್ ಕಾಲೇಜಿನಲ್ಲಿಯೇ ಎಂ.ಎಸ್ಸಿ. ವ್ಯಾಸಂಗ ಮಾಡಿದ ದಿನಗಳನ್ನು ಮೆಲುಕು ಹಾಕಿದ ಅವರು ಅಂದಿನ ಕುಲಪತಿಗಳಾದ ಡಾ.ಎಚ್. ನರಸಿಂಹಯ್ಯನವರು ತಮಗೆ ನೀಡಿದ ಉತ್ತೇಜನ ಮತ್ತು ನೈತಿಕ ಬೆಂಬಲವನ್ನು ಇದೇ ವೇಳೆ ಕೃತಜ್ಞತೆಯಿಂದ ಸ್ಮರಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕವಯಿತ್ರಿ ಪ್ರೊ. ಮಮತಾ ಸಾಗರ್‌ರವರು ಜಾತಿ-ಧರ್ಮದ ಜೊತೆಗೆ ಲಿಂಗ ತಾರತಮ್ಯ ನಿವಾರಣೆಗೂ ಗಮನ ಹರಿಸಿದರೆ ಮಾತ್ರ ಸಾಮಾಜಿಕ ಸಮಾನತೆಯ ಗುರಿಯನ್ನು ತಲುಪಲು ಸಾಧ್ಯವೆಂದು ವಿಶ್ಲೇಷಿಸಿದರು. ಮಹಿಳೆಯರ ಬದುಕನ್ನು ಸಕಲ ರೀತಿಯಲ್ಲೂ ನಿಯಂತ್ರಿಸಲು ಹವಣಿಸುವ ಪುರುಷ ಪ್ರಧಾನ ಸಮಾಜದ ಧೋರಣೆಯನ್ನು ಕಟುವಾಗಿ ಟೀಕಿಸಿದ ಅವರು ಸರ್ವರನ್ನೂ ಒಳಗೊಳ್ಳುವ ಮನೋಭಾವ ಅತ್ಯಗತ್ಯವೆಂದು ನುಡಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಖ್ಯಾತ ಚಲನಚಿತ್ರ ತಾರೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಉಮಾಶ್ರೀಯವರು ಸ್ತ್ರೀಯರನ್ನು ಗೌರವಿಸುವ ಮತ್ತು ರಕ್ಷಿಸುವ ಮಾನವೀಯ ಅಂತಃಕರಣವನ್ನು ಯುವ ಸಮೂಹ ರೂಢಿಸಿಕೊಳ್ಳಬೇಕೆಂದು ಸಲಹೆಯಿತ್ತರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಅವರು ಮಹಿಳೆಯರಿಗೆ ಹೆಚ್ಚಿನ ಅವಕಾಶ ಮತ್ತು ಪ್ರೋತ್ಸಾಹ ಒದಗಿಸುವ



ಚಿತ್ರತಾರೆ, ರಂಗಭೂಮಿ ಕಲಾವಿದೆ ಡಾ.ಉಮಾಶ್ರೀಯವರ ಅಭಿನಯದ 'ಶರ್ಮಿಷ್ಠೆ' ನಾಟಕದ ದೃಶ್ಯ

ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಆಡಳಿತ ಕುಲಸಚಿವರಾದ ಎ. ನವೀನ್ ಜೋಸೆಫ್ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ ವಂದಿಸಿದರು. ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಮೇಧಾ ಇಟಗಿ ಹುಯಿಲಗೋಳ ಪ್ರಾಸ್ತಾವಿಕ ಭಾಷಣ ಮಾಡಿದರು. ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ ಬಿ. ಕುಡೇನಟ್ಟಿ ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕರಾದ ಹಾಜಿರಾ ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಲಾಗಿದ್ದ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಭಾಗವಾಗಿ ಡಾ.ಉಮಾಶ್ರೀಯವರ ಅಭಿನಯದ "ಶರ್ಮಿಷ್ಠೆ" ಏಕವ್ಯಕ್ತಿ ನಾಟಕ ಪ್ರದರ್ಶಿಸಲಾಯಿತು.

### ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಪ್ರೊ. ಮಮತಾ ಸಾಗರ್, ಡಾ. ಉಮಾಶ್ರೀ ಮತ್ತು ಡಾ. ಶುಭ. ವಿ. ಅಯ್ಯಂಗಾರ್ ಅವರಿಗೆ ಗೌರವ ಸಮರ್ಪಣೆ.

## ವಿಜ್ಞಾನ ವಿಷಯ ಅಧ್ಯಯನ- ಸಂಶೋಧನೆಗೆ ಉತ್ತೇಜನ : ಕುಲಪತಿ ಭರವಸೆ

ವಿಜ್ಞಾನ ಕ್ಯಾಂಪಸ್ ಎಂದೇ ಹೆಸರಾಗಿದ್ದ ಸೆಂಟ್ರಲ್ ಕಾಲೇಜಿನ ಶೈಕ್ಷಣಿಕ ಪರಂಪರೆಯನ್ನು ಮುಂದುವರಿಸಲು ವಿಜ್ಞಾನ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಗೆ ವಿಶೇಷ ಉತ್ತೇಜನ ನೀಡಲಾಗುವುದೆಂದು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಪ್ರಕಟಿಸಿದ್ದಾರೆ.

ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರಸ್ತುತ ಮೂಲ ವಿಜ್ಞಾನ ವಿಷಯಗಳ ಕಲಿಕೆಯ ವಿದ್ಯಾರ್ಥಿಗಳ ಸಂಖ್ಯೆ ಅತ್ಯಲ್ಪವಾಗಿದೆ ಎಂದು ವಿವರಿಸಿದರು.

ದೇಶದ ಸರ್ವತೋಮುಖ ಪ್ರಗತಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧನೆ ಮತ್ತು ಅನ್ವೇಷಣೆಗಳ ಪಾತ್ರ ಮಹತ್ವದ್ದಾಗಿದ್ದು ಜನರ ಜೀವನ ಗುಣಮಟ್ಟ ಸುಧಾರಣೆಗೆ ಮೂಲಾಧಾರವಾಗಿದೆ ಎಂದು ಅವರು ಪ್ರತಿಪಾದಿಸಿದರು.

ಸಮಾಜದ ಕೆಳಸ್ತರಗಳ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರಲ್ಲಿ ಆಳವಾಗಿ ಬೇರೂರಿರುವ ಮೌಢ್ಯವನ್ನು ನಿವಾರಿಸಿ ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ಕಾರ್ಯೋನ್ಮುಖವಾಗಬೇಕೆಂದು ಅವರು ಅಭಿಪ್ರಾಯಪಟ್ಟರು. ಸಾಮಾಜಿಕ ಜೀವನ ಸಮೃದ್ಧಗೊಳಿಸಲು ವಿಜ್ಞಾನ ಚಳುವಳಿಯನ್ನು ಬಲಪಡಿಸಬೇಕಾದ ಅಗತ್ಯವಿದೆಯೆಂದು ಕುಲಪತಿಗಳು ಇದೇ ಸಂದರ್ಭದಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ವಿಜ್ಞಾನಿ ಮತ್ತು ಎಸಿಎಸ್ ಐಆರ್ ಪ್ರಾಧ್ಯಾಪಕರಾದ ಡಾ.ಶ್ರೀದೇವಿ ಜಡೇ ಅವರು ಸಾಮಾಜಿಕ ಮತ್ತು ಕೌಟುಂಬಿಕ ಕಾರಣಗಳಿಂದಾಗಿ ಉನ್ನತ ಶಿಕ್ಷಣದ ಹಂತದಲ್ಲಿ ಹೆಣ್ಣುಮಕ್ಕಳು ವಿದ್ಯಾಭ್ಯಾಸ ತೊರೆಯುವ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಬೇಕೆಂಬ ಅಭಿಲಾಷೆಯನ್ನುವ್ಯಕ್ತಪಡಿಸಿದರು. ಈ ಬಾರಿಯ ವಿಜ್ಞಾನ ದಿನಾಚರಣೆಯ ಘೋಷವಾಕ್ಯದ ಆಶಯದಂತೆ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚುವಂತಾಗಲು ಹೆಣ್ಣುಮಕ್ಕಳು ವಿಜ್ಞಾನ ವಿಷಯಗಳ ಅಧ್ಯಯನದತ್ತ ವಿಶೇಷ ಆಸಕ್ತಿ ಬೆಳೆಸಿಕೊಳ್ಳಬೇಕೆಂದು ಅವರು ಸಲಹೆಯಿತ್ತರು.



ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾಯಕ್ರಮಕ್ಕೆ ಹಿರಿಯ ವಿಜ್ಞಾನಿ ಡಾ. ಶ್ರೀದೇವಿ ಜಡೇ, ಕುಲಪತಿ ಪ್ರೊ. ರಮೇಶ್.ಬಿ ಮತ್ತು ಇತರೆ ಪ್ರಮುಖರಿಂದ ಚಾಲನೆ

ಪ್ರಾಸ್ತಾವಿಕ ಭಾಷಣ ಮಾಡಿದ ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯದ ಡೀನರಾದ ಪ್ರೊ. ಪಿ.ಆರ್. ಚೇತನರವರು ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆಯನ್ನು ಇಡೀ ವರ್ಷ ವಿದ್ಯಾರ್ಥಿಗಳಿಗೆ ಪರಿಚಯಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

ಕುಲಸಚಿವರಾದ (ಮೌಲ್ಯಮಾಪನ) ಪ್ರೊ. ರಮೇಶ ಬಿ.ಕುಡೇನಟ್ಟಿಯವರು "ರಾಮನ್ ಪರಿಣಾಮ" ಸಂಶೋಧನೆಗೆ ಸಂದ ವಿಶ್ವಮನ್ನಣೆಯ ಸ್ಮರಣಾರ್ಥ ಭಾರತ ಸರ್ಕಾರ 1986 ರಿಂದ ಪ್ರತಿವರ್ಷ ಫೆಬ್ರುವರಿ 28 ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಮ್ಮಿಕೊಂಡಿರುವ ಬಗ್ಗೆ ಉಲ್ಲೇಖಿಸಿದರು.

ಡಾ. ಶ್ರೀದೇವಿ ಜಡೇಯವರು ಡೇಟಾ ಸೈನ್ಸ್ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


ವಿಜ್ಞಾನ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಭಿತ್ತಿಚಿತ್ರ ರಚನೆ, ಚರ್ಚಾಸ್ಪರ್ಧೆ ಮತ್ತು ಕ್ವಿಜ್‌ನಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಲಾಯಿತು.

–ಸರ್ವಜಿತ್ ಕುಮಾರ್ ಜೆ.ಎನ್.
ಉಪನ್ಯಾಸಕರು, MCJ

## 'ಭಾರತ ರತ್ನ' ಸರ್ ಸಿ.ವಿ. ರಾಮನ್

ಕೊಲ್ಕತ್ತ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕರಾಗಿದ್ದ ಸರ್ ಚಂದ್ರಶೇಖರ ವೆಂಕಟರಾಮನ್‌ರವರು ಸೆಂಟ್ರಲ್ ಕಾಲೇಜ್ ಸೈನ್ಸ್ ಕ್ಲಬ್ ಹಾಗೂ ದಕ್ಷಿಣ ಭಾರತ ವಿಜ್ಞಾನ ಸಂಘದ ಆಮಂತ್ರಣದ ಮೇರೆಗೆ ಬೆಂಗಳೂರಿಗೆ ಆಗಮಿಸಿದ್ದರು. 1928 ಮಾರ್ಚ್ 16ರಂದು ಫಿಸಿಕ್ಸ್ ಬ್ಲಾಕ್‌ನಲ್ಲಿ 'ರಾಮನ್ ಎಫೆಕ್ಟ್' ಎಂದೇ ಪ್ರಸಿದ್ಧವಾದ 'ಬೆಳಕಿನ ವಕ್ರರೇಖೆ'ಯ ಕುರಿತ ತಮ್ಮ ಅನ್ವೇಷಣೆಯನ್ನು ಅದೇ ಮೊದಲಬಾರಿಗೆ ಪ್ರಕಟಿಸಿದರು. ಇದಕ್ಕಾಗಿ ಅವರಿಗೆ 1930ರಲ್ಲಿ ಭೌತವಿಜ್ಞಾನ ನೊಬೆಲ್ ಪಾರಿತೋಷಕ ಲಭಿಸಿತು. ಸೆಂಟ್ರಲ್ ಕಾಲೇಜಿನಲ್ಲಿರುವ ಆ ಐತಿಹಾಸಿಕ ಸಭಾಂಗಣವನ್ನು 'ರಾಮನ್ ಹಾಲ್' ಎಂದೇ ಹೆಸರಿಸಲಾಗಿದೆ. ವಿಜ್ಞಾನ ಕ್ಷೇತ್ರದಲ್ಲಿನ ಮೇರುಸಾಧನೆಗೆ ನೊಬೆಲ್ ಪಾರಿತೋಷಕವನ್ನು ಪಡೆದ ಏಷ್ಯಾ ಖಂಡದ ಪ್ರಥಮ ವಿಜ್ಞಾನಿ ಇವರಾಗಿದ್ದಾರೆ. 1933ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ (ಐಐಎಸ್‌ಸಿ) ಪ್ರಪ್ರಥಮ ಭಾರತೀಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ

ಸಿ.ವಿ.ರಾಮನ್, 1948ರಲ್ಲಿ ನಿವೃತ್ತರಾದ ನಂತರ 'ರಾಮನ್ ಸಂಶೋಧನಾ ಸಂಸ್ಥೆ'ಯನ್ನು ಸ್ಥಾಪಿಸಿದರು. 1954ರಲ್ಲಿ ಇವರಿಗೆ ಪ್ರತಿಷ್ಠಿತ 'ಭಾರತ ರತ್ನ' ಮತ್ತು 1957ರಲ್ಲಿ ಲೆನಿನ್ ಶಾಂತಿ ಪ್ರಶಸ್ತಿ' ಯನ್ನೂ ಸಹ ನೀಡಿ ಪುರಸ್ಕರಿಸಲಾಯಿತು. ಭಾರತ ಸರ್ಕಾರದ ನಿರ್ದೇಶನದ ಮೇರೆಗೆ 1987ರಿಂದ ಫೆಬ್ರವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತಿದೆ.



ಸೆಂಟ್ರಲ್ ಕಾಲೇಜಿನ ತರಗತಿ ಕೋಣೆಯಲ್ಲಿ ಸರ್ ಸಿ.ವಿ. ರಾಮನ್ 'ಬೆಳಕಿನ ವಕ್ರರೇಖೆ' ಕುರಿತ ತಮ್ಮ ಅನ್ವೇಷಣೆಯನ್ನು ಮೊಟ್ಟಮೊದಲ ಬಾರಿಗೆ ಪ್ರಸ್ತುತಪಡಿಸಿದರು.

# ಮಾಧ್ಯಮ ಹಬ್ಬ–2026: ಪತ್ರಕರ್ತರ ಸಾಮಾಜಿಕ ಹೊಣೆಗಾರಿಕೆ ಪರ್ಯಾಲೋಚನೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಭಾರತಿ, ಸಹಯೋಗದಲ್ಲಿ ಮಾರ್ಚ್ 4 ಮತ್ತು 5ರಂದು 'ಮಾಧ್ಯಮ ಹಬ್ಬ–2026' ಕಾರ್ಯಾಗಾರವನ್ನು ಸೆಂಟ್ರಲ್ ಕಾಲೇಜ್ ಪ್ರಸನ್ನಕುಮಾರ್ ಬ್ಲಾಕ್‌ನಲ್ಲಿನ ನೂತನ ಶೈಕ್ಷಣಿಕ ವಿಭಾಗದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

'ಮಾಧ್ಯಮ ಹಬ್ಬ–2026' ಕಾರ್ಯಾಗಾರದಲ್ಲಿ ಮಾಧ್ಯಮ ನೈತಿಕತೆ, ಪತ್ರಿಕೋದ್ಯಮದಲ್ಲಿ ಮಹಿಳೆಯರು–ಸವಾಲುಗಳು ಮತ್ತು ಪರಿಹಾರ, OTT- ಆರಂಭ ಮತ್ತು ಭವಿಷ್ಯ, ಅಭಿವ್ಯಕ್ತಿ ಮಾಧ್ಯಮವಾಗಿ ಚಲನಚಿತ್ರಗಳು, ಮಾಧ್ಯಮಗಳ ಸಾಮಾಜಿಕ ಹೊಣೆಗಾರಿಕೆ ಕು–ರಿತು ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು.

ಪ್ರಾಸ್ತಾವಿಕವಾಗಿ ಮಾತನಾಡಿದ ಬೆಂಗಳೂರು ನಗರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾದ ಪಲ್ಲವಿ ಹೊನ್ನಾಪುರ, ಮಾಧ್ಯಮ ರಂಗ ಪ್ರವೇಶಿಸುವ ಮುನ್ನ ಪತ್ರಿಕೋದ್ಯಮದ ಸೂಕ್ಷ್ಮತೆಗಳನ್ನು ಅರಿತುಕೊಳ್ಳಬೇಕಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಾಗಾರ ಉದ್ಘಾಟಿಸಿದ ಮುಖ್ಯ ಮಂತ್ರಿಯವರ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಮಾಧ್ಯಮ ಲೋಕದಲ್ಲಿ ಸತ್ಯವನ್ನು ಬೂತಕನ್ನಡಿ ಹಾಕಿ ಹುಡುಕುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮಾರ್ಮಿಕವಾಗಿ ನುಡಿದರು. ಗಾಂಧೀಜಿ ಮತ್ತು ಅಂಬೇಡ್ಕರ್ ಕೂಡಾ ಪತ್ರಕರ್ತರಾಗಿದ್ದರು, ಅವರ ಕಾಲದಲ್ಲಿ



'ಮಾಧ್ಯಮ ಹಬ್ಬ' ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ರಮೇಶ್.ಬಿ, ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಹಿರಿಯ ಪತ್ರಕರ್ತ ದಿನೇಶ್ ಅಮ್ಮಿನಮಟ್ಟು, ಕುಲಸಚಿವರಾದ ಎ. ನವೀನ್ ಜೋಸೆಫ್ ಹಾಗೂ ಇತರೆ ಪ್ರಮುಖರು ಭಾಗವಹಿಸಿದ್ದರು.

ಪತ್ರಿಕೋದ್ಯಮಕ್ಕೆ ಹಣದ ಬಡತನವಿತ್ತು, ಆದರೆ ಸತ್ಯಕ್ಕೆ ಬಡತನವಿರಲಿಲ್ಲ, ಆದರೆ ಹಣದ ಬಡತನದಿಂದ ಹೊರಬಂದಿರುವ ಪತ್ರಿಕೋದ್ಯಮ ಇಂದು ಸತ್ಯದ ಬಡತನಕ್ಕೆ ಜಾರಿದೆ. ಮಾಧ್ಯಮ ಜನರಿಗೆ ನಿರ್ಭೀತಿಯಿಂದ ಸತ್ಯವನ್ನು ತಿಳಿಸುವ ಪ್ರಯತ್ನ ಮಾಡುವ ಜೊತೆಗೆ ನೊಂದವರು, ಶೋಷಿತರು, ರೈತರು ಮತ್ತು ಬಡವರ ಪರವಾಗಿ ಶ್ರಮಿಸಬೇಕೆಂದು ಪ್ರತಿಪಾದಿಸಿದರು.

'ಮೀಡಿಯಾ ಎಥಿಕ್ಸ್' ವಿಷಯದ ಬಗ್ಗೆ ಮಾತನಾಡಿದ ಹಿರಿಯ ಪತ್ರಕರ್ತರಾದ ದಿನೇಶ್ ಅಮೀನಮಟ್ಟು, ಉತ್ತಮ ಪತ್ರಕರ್ತನಾಗಲು ಸಪ್ತಸೂತ್ರಗಳನ್ನು ಪಾಲಿಸುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಜ್ಞಾನವನ್ನು ಗಳಿಸಿಕೊಳ್ಳಿ, ಸಾಮಾಜಿ–ಕ ಜವಾಬ್ದಾರಿಯನ್ನು ರೂಢಿಸಿಕೊಳ್ಳಿ, ಪೂರ್ವಾಗ್ರಹ ಪೀಡಿತರಾಗದೆ ಮುಕ್ತವಾಗಿ ಆಲೋಚಿಸಿ, ಸೂಕ್ಷ್ಮ ಸಂವೇದನೆ ಬೆಳೆಸಿಕೊಳ್ಳಿ, ಸಿನಿಕರಾಗದೆ ಕ್ರಿಯಾಶೀಲರಾಗಿರಿ, ನಂಬಿಕೆ ದ್ರೋಹ ಮಾಡದಿರಿ ಮತ್ತು ಆತ್ಮರತಿಗೆ ಈಡಾಗುವ ಮೂಲಕ ದೊಡ್ಡ ಸೆಲಬ್ರಿಟಿ ಎಂದು ಬೀಗಬೇಡಿ ಎಂಬ ಸಲಹೆಗಳನ್ನು ಅವರು ನೀಡಿದರು.

ಕಾರ್ಯಾಗಾರದ ಎರಡನೇ ದಿನ ಹಿರಿಯ ಪತ್ರಕರ್ತರಾದ ಡಿ. ಉಮಾಪತಿ "ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿ" ಕು–ರಿತು ಉಪನ್ಯಾಸ ನೀಡಿದರು. ಮಾಧ್ಯಮಗಳು ನಿಷ್ಪಕ್ಷಪಾತವಾಗಿ ತಮ್ಮ ಸಾಮಾಜಿಕ ಜವಾಬ್ದಾರಿ ನಿರ್ವಹಿಸಬೇಕಾದರೆ ಸುದ್ದಿ ಮನೆಗಳ ಪರಿಸರ ಬಹುಮುಖಿಯಾಗುವ ಅಗತ್ಯವಿದ್ದು ಎಲ್ಲ ಸಮುದಾಯದವರಿಗೂ ಪ್ರಾತಿನಿಧ್ಯ ನೀಡಬೇಕಿದೆ ಎಂದು ಅಭಿಪ್ರಾಯಪಟ್ಟರು. ಕೆಲವು ಸಮಾಜಮುಖಿ ಸುದ್ದಿ ವಾಹಿನಿಗಳು, ಡಿಜಿಟಲ್ ಮಾಧ್ಯಮಗಳು ಆರ್ಥಿಕ ಸಂಕಷ್ಟದ ನಡುವೆಯೂ ವೃತ್ತಿನಿಷ್ಠೆಯನ್ನುಪಾಲಿಸುತ್ತಿದ್ದು ಓದುಗರು, ವೀಕ್ಷಕರು ಬೆಂಬಲಿಸಿದರೆ ಕಾಲಕ್ರಮೇಣ ನೈಜ ಸಾಮಾಜಿಕ ನ್ಯಾಯ ಎತ್ತಿಹಿಡಿಯುವ ವಸ್ತುನಿಷ್ಠ ಪತ್ರಿಕೋದ್ಯಮ ಮತ್ತೆ ತಲೆಯೆತ್ತಲು ಸಾಧ್ಯವಾಗುತ್ತದೆ ಎಂಬ ಆಶಾಭಾವವನ್ನು ಅವರು ವ್ಯಕ್ತಪಡಿಸಿದರು. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಕೆ. ರವಿಯವರು ಮಾತನಾಡಿ, ಸಮಾಜಮುಖಿ ಚಿಂತನೆ ರೂಢಿಸಿಕೊಂಡ ಮಾಧ್ಯಮ ಅವಕಾಶವಂಚಿತ ಸಮುದಾಯಗಳ ಪರವಾಗಿ ದನಿ ಎತ್ತಬೇಕೆಂದು ಹೇಳಿದರು. ಸಾಮಾಜಿಕ ಹೊಣೆಗಾರಿಕೆ ಮರೆತ ಮಾಧ್ಯಮ ಬಹುಕಾಲ ಜನರ ವಿಶ್ವಾಸಾರ್ಹತೆ ಪಡೆಯಲಾರದು. ಇಂದಿನ ಯುವ ಪೀಳಿಗೆಯು ಇತಿಹಾಸವನ್ನು ಅರಿತುಕೊಂಡಿರಬೇಕೆಂದು ಅವರು ಕಿವಿಮಾತು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ರಮೇಶ್ ಬಿ. ಅವರು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಮಾಧ್ಯಮದ ವಿವಿಧ ಆಯಾಮಗಳನ್ನು ಪರಿಚಯಿಸಿ, ಸ್ಪರ್ಧೆಗಳ ಮೂಲಕ ಅವರಲ್ಲಿ ಕ್ಷೇತ್ರದ ಪ್ರಾಯೋಗಿಕ ಅನುಭವ ದೊರಕಿಸಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅರ್ಥಪೂರ್ಣ ಕಾರ್ಯಕ್ರಮದ ಕುರಿತು ಅಪಾರ ಪ್ರಶಂಸೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷರಾದ ಆಯೇಷಾ ಖಾನಂ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಡಳಿತ ಕುಲಸಚಿವರಾದ ನವೀನ್ ಜೋಸೆಫ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಕ್ಷರಾದ ಡಾ. ತಾಂಡವಗೌಡ ಟಿ.ಎನ್, ಬಿಯುಬಿ ಸಂವಹನ ವಿಭಾಗದ ಮುಖ್ಯಸ್ಥರಾದ ಪ್ರೊ. ಬಿ. ಶೈಲಶ್ರೀ, ಎಲೆಕ್ಟ್ರಾನಿಕ್ ಮೀಡಿಯಾ ವಿಭಾಗದ ಸಂಂ–ಯೋಜಕರಾದ ಪ್ರೊ. ವಾಹಿನಿ ಅರವಿಂದ್, ಕರ್ನಾಟಕ ಎಸ್.ಸಿ, ಎಸ್.ಟಿ, ಪಂಗಡ ಅಲೆಮಾರಿ ಅಭಿವೃದ್ಧಿ ನಿಮಗದ ಅಧ್ಯಕ್ಷರಾದ ಪಲ್ಲವಿ ಜಿ. ಸೇರಿದಂತೆ ಮತ್ತಿತರ ಹಿರಿಯ ಮಾಧ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಎರಡು ದಿನಗಳ ಕಾಲ ನಡೆದ 'ಮಾಧ್ಯಮ ಹಬ್ಬ–2026' ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಸಂಪಾದಕೀಯ ಬರವಣಿಗೆ, ರೇಡಿಯೋ ಸಂದರ್ಶನ, ಪತ್ರಿಕಾಗೋಷ್ಠಿ ವರದಿಗಾ–ರಿಕೆ, ಮೊಬೈಲ್ ಜರ್ನಲಿಸಂ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಪ್ರಶಂಸನಾ ಪತ್ರ ಹಾಗೂ ಟ್ರೋಫಿಗಳನ್ನು ನೀಡಲಾಯಿತು. ಚಲನಚಿತ್ರ ನಿರ್ದೇಶಕರಾದ ಬಿ.ಸುರೇಶ್ ಉಪಸ್ಥಿತರಿದ್ದರು.

**–ಡಾ.,ಡಿ.ಎಸ್. ಪ್ರವೀಣ್,**
ಉಪನ್ಯಾಸಕರು, MCJ

# 'ಭೀಮ ಗಾಯನ' ವಿಶೇಷ ಅಭಿಯಾನ

ಬೆಂಗಳೂರು ನಗರಜಿಲ್ಲೆಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿಶ್ವವಿದ್ಯಾನಿಲಯದ ಡಾ. ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಭೀಮ ಗಾಯನ ವಿಶೇಷ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರ ಸಮಾಜ ಸುಧಾರಣೆಯ ವಿಚಾರಧಾರೆಗಳನ್ನು ಹಾಡುಗಳ ಮೂಲಕ ಜನಮಾನಸದಲ್ಲಿ ಜಾಗೃತಗೊಳಿಸುವ ಕರ್ನಾಟಕ ಸರ್ಕಾರದ ಘನ ಉದ್ದೇಶದ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ. ಜಿ. ಸಮಾರಂಭವನ್ನು ಉದ್ಘಾಟಿಸಿದರು. ಸಾಮಾಜಿ–ಕ ಸಮಾನತೆಯ ಹರಿಕಾರ ಬಸವಣ್ಣನವರ ಮಾರ್ಗದಲ್ಲಿ ಜಾತಿ, ಧರ್ಮ, ವರ್ಗ ಮತ್ತು ಲಿಂಗ ತಾರತಮ್ಯಗಳ ನಿವಾರಣೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವಿರತವಾಗಿ ಹೋರಾಡಿದರೆಂದು ಅವರು ಸ್ಮರಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಅವರು ಶಿಕ್ಷಣ ಮತ್ತು ಕೌಶಲ್ಯ ಕಲಿಕೆಯ ಜೊತೆಗೆ ಶ್ರೇಷ್ಠ ಚಿಂತಕರು ಪ್ರತಿಪಾದಿಸಿದ ಸಾಮಾಜಿಕ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನುಉತ್ತೇಜಿಸಿದರು. ವಿಶೇಷ ಆಹ್ವಾನಿತರಾಗಿ ಅಗಮಿಸಿದ್ದ ಕರ್ನಾಟಕ ಜಾನಪದ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷರಾದ ಪ್ರಖ್ಯಾತ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಅವರು ಯುವ ಮನಸ್ಸುಗಳಲ್ಲಿ ವೈಚಾರಿಕ ಮನೋಭಾವ ಬೆಳೆಸುವ ವಿಶ್ವವಿದ್ಯಾನಿಲಯದ ಪ್ರಯತ್ನವನ್ನು ಶ್ಲಾಘಿಸಿದರು. ವಿಶ್ವವಿದ್ಯಾನಿಲಯದ ಡಾ. ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ.ಕೆ.ಆರ್. ಜಲಜಾ ಹಾಗೂ ಸಿಂಡಿಕೇಟ್ ಸದಸ್ಯರಾದ ಡಾ. ಫ್ರಾನ್ಸಿಸ್ ಅಲ್ಮೇಡಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾದ ಪಲ್ಲವಿ ಹೊನ್ನಾಪುರ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು. ಮೈಸೂರಿನ ಅಮ್ಮ ವಸುಂಧರೆ ಕಲಾತಂಡದವರು ಜಾಗೃತಿಗೀತೆಗಳನ್ನು ಪ್ರಸ್ತುತಪಡಿಸಿದರು. ಮಂಜುಳ ಕೋಲಾರ ಕಾರ್ಯಕ್ರಮ ನಿರೂಪಿಸಿದರು. ಕನ್ನಡ ವಿಭಾಗದ ಉಪನ್ಯಾಸಕರಾದ ಡಾ ಮಂಜು ಸಿ.ಎನ್. ಅತಿಥಿಗಳನ್ನು ಸ್ವಾಗತಿಸಿದರು.



ವಾರ್ತಾ ಇಲಾಖೆ ಮತ್ತು ವಿಶ್ವವಿದ್ಯಾನಿಲಯದ ಸಂಯಕ್ತ ಆಶ್ರಯದಲ್ಲಿ 'ಭೀಮ ಗಾಯನ' ಅಭಿಯಾನ ಕಾರ್ಯಕ್ರಮ

# ಮಹಿಳಾ ಘಟಕ ಕಾಲೇಜಿನ ಸಂಸ್ಥಾಪನಾ ದಿನಾಚರಣೆ



ವಿ.ವಿ. ಮಹಿಳಾ ಘಟಕ ಕಾಲೇಜಿನಲ್ಲಿ ಗಣ್ಯರಿಂದ 4ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ

ಮಲ್ಲೇಶ್ವರಂನಲ್ಲಿರುವ ವಿಶ್ವವಿದ್ಯಾನಿಲಯದ ಮಹಿಳಾ ಘಟಕ ಕಾಲೇಜು ನಾಲ್ಕು ವರ್ಷವನ್ನು ಪೂರೈಸಿ ಐದನೇ ವರ್ಷದತ್ತ ಸಾಗುತ್ತಿರುವ ಸಂದರ್ಭದಲ್ಲಿ ಮಾರ್ಚ್ 10 ರಂದು ಕಾಲೇಜಿನ ಆವರಣದಲ್ಲಿನ ರೋಟರಿ ಸಭಾಂಗಣದಲ್ಲಿ ಸಂಸ್ಥಾಪನಾ ದಿನಾಚರಣೆ ಮತ್ತು ಮಹಿಳಾ ದಿನಾಚರಣೆಯನ್ನು ಆಚ–ರಿಸಲಾಯಿತು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್ ಬಿ. ರವರು ಕಾಲೇಜಿನಲ್ಲಿ ಬಡಕುಟುಂಬಗಳ ಹೆಣ್ಣು ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುತ್ತಿರುವ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. ದೇಶದ ಅಭಿವೃದ್ಧಿಯು ಮಹಿಳೆಯರ ಪ್ರಗತಿಯನ್ನು ಅವಲಂಬಿಸಿದೆ ಎಂಬ ಡಾ. ಬಿ.ಆರ್. ಅಂಬೇಡ್ಕರ್‌ರವರ ನಿಲುವನ್ನು ಪ್ರಸ್ತಾಪಿಸಿದ ಅವರು ಸಂಸತ್ ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಆದಷ್ಟು ಬೇಗ ಅನುಷ್ಠಾನಗೊಳ್ಳಬೇಕೆಂದು ಪ್ರತಿಪಾದಿಸಿದರು. ಮಹಿಳೆಯ–ರಿಗೆ ಆಸ್ತಿ ಹಕ್ಕು ಇನ್ನೂ ಪ್ರಾಯೋಗಿಕವಾಗಿ ಕೈಗೆಟುಕದಿರುವ ವಾಸ್ತವ ಪರಿಸ್ಥಿತಿಯನ್ನುಗಮನಕ್ಕೆತಂದರು.

ಪ್ರಭಾರ ಪ್ರಾಂಶುಪಾಲರಾದ ಡಾ.ಜ್ಯೋತಿ ವೆಂಕಟೇಶ್‌ರವರು ವಾರ್ಷಿಕ ವರದಿಯನ್ನು ಪ್ರಸ್ತುತಪಡಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅರ್ಥ–ಎಲಿಮೆಂಟ್ಸ್ ಆಫ್ ಆರ್ಟ್ ಅಂಡ್ ಹೆರಿಟೇಜ್ ಅಕಾಡೆಮಿ ಪ್ರಾಂಶುಪಾಲರಾದ ರೂಪ ರವೀಂದ್ರನ್ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹತ್ವದ ಕುರಿತು ವಿವರಿಸಿದರು. ಗೌರವ ಅತಿಥಿಯಾಗಿ ಆಗಮಿಸಿದ್ದ ಸಮರ್ಥನಂ ಅಂಗವಿಕಲರ ಟ್ರಸ್ಟ್‌ನ ಟ್ರಸ್ಟಿಗಳಾದ ವಸಂತಿ ಸವಣೂರು ತಮ್ಮ ಸಂಸ್ಥೆಯು ಅಂಗವಿಕಲ ಮಹಿಳೆಯ–ರಿಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ. ಸಂಸ್ಥೆಯ ಅಂಧ ಹೆಣ್ಣು ಮಕ್ಕಳು ವಿಶ್ವ ಅಂಧ ಹೆಣ್ಣು ಮಕ್ಕಳ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸಿದ್ದಾರೆಂದು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ( ಬೆಂಗಳೂರು ಜಿಲ್ಲೆ) ಕಾರ್ಯದರ್ಶಿಗಳಾದ ರಾಜೇಶ್‌ರವರು ಮಾತನಾಡಿ 32 ವಿದ್ಯಾರ್ಥಿನಿಯ ರಿಂದ ಪ್ರಾರಂಭವಾದ ಈ ಕಾಲೇಜಿನಲ್ಲಿ ಇದೀಗ 400ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಕಲಿಯುತ್ತಿರುವ ಬಗ್ಗೆ ಪ್ರಶಂಸಿಸಿದರು. ಕಾಲೇಜಿನ ಉಪನ್ಯಾಸಕಿಯರು ಸ್ತ್ರೀ ಸಮಾನತೆ ಆಶಯ ಗೀತೆಗಳನ್ನು ಪ್ರಸ್ತುತಪಡಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿ ಪ್ರೀತಿ ವಂದಿಸಿದರು.

# World Social Work Day-2026



World Social Work Day celebration at Dr. MSBCU

The Department of Social Work, Dr, Manmohan Singh Bengaluru City University, celebrated 'World Social Work Day-2026' on 17 March 2026 on the theme "Co-building hope and harmony: A Harambee call to unite divided society" inspired by the African Philosophy of Harambee – meaning "Pulling Together". Prof.Ramesh B, Vice-chancellor, in his inaugural speech highlighted the history, genesis and essence of the celebration of World Social Work Day. Further he explained the ongoing developments happening across the globe stressing more on the divided societal implications. He encouraged the budding social work professionals to rebuild trust, cohesion, shared responsibility and co-building nature. He also mentioned about the causes and effects of the prolonged conflicts between US and Iran, Iran and Israel, Russia and Ukraine and the impact of these developments on human society. He emphasised the role of social workers in addressing the crisis as these conflicts result in loss of life and massive hardships affecting women and children. The Chief Guest of the programme Ms.Ruth Manorama, Social Activist, Right Livelihood Awardee and a Veteran Social Work Practitioner, in her speech elaborately explained the present social realities with all pertinent factors covering many illustrations and examples. She focussed more on the priorities and commitments of professional social workers with collective responsibility, solidarity and collaborative action in fostering social cohesion and inclusive development. Prof. Ritika Sinha, Chairperson of the Department in her presidential remarks expressed her deepest concern towards the society by giving importance to how social workers build bridges rather than walls, strengthen communities through communication and dialogue, open our doors to those in need, uphold the dignity of all people, promote social justice and dedicate ourselves to serving humanity with love and lot of hope and building harmony. As part of the programme, various competitions and cultural activities were arranged and prizes were distributed to the winners. Ms.Vanishree, Faculty, welcomed the guests and participants. Mrs. Rashmi C.R, Faculty, delivered introductory remarks and coordinated the programme. Dr.Rajashekar.C, Faculty, feciliated in conducting the event. Dr.N.Sabeeda, Asst.Professor, Department of Social Work, Acharya Institute of Graduate Studies (AIGS) proposed vote of thanks. All the faculties and students of the department and AIGS actively participated in the programme.

**-Dr.Venktesha Murthy. S.**
Faculty, Dept.of Social Work

## ಉನ್ನತ ಶಿಕ್ಷಣ: ಒಳಗೂ ಹೊರಗೂ ಪುಸ್ತಕ ಬಿಡುಗಡೆ



ಸೆಂಟ್ರಲ್ ಕಾಲೇಜನಿ ಆವರಣದಲ್ಲಿ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪನವರು ಶಿಕ್ಷಣ ತಜ್ಞರಾದ ಬಿ. ಶ್ರೀಪಾದ ಭಟ್‌ರವರ, **'ಉನ್ನತ ಶಿಕ್ಷಣ: ಒಳಗೂ ಹೊರಗೂ'** ಕೃತಿಯನ್ನು ಬಿಡುಗಡೆಗೊಳಿಸಿದರು. ಕುಲಪತಿಗಳಾದ ಪ್ರೊ ರಮೇಶ್ ಬಿ, ಚಿಂತಕರಾದ ಎ. ನಾರಾಯಣ, ದಲಿತ ಸಂಘರ್ಷ ಸಮಿತಿ ನಾಯಕರಾದ ಮಾವಳ್ಳಿ ಶಂಕರ್ ಹಾಗೂ ಕೃತಿಯ ಲೇಖಕರು ಉಪಸ್ಥಿತರಿದ್ದರು.

## ಸ್ವದೇಶಿ ವಿಜ್ಞಾನ ಆಂದೋಲನ ಪ್ರಶಸ್ತಿ

ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಜರುಗಿದ 18ನೇ ಕನ್ನಡ ವಿಜ್ಞಾನ ಸಮ್ಮೇಳನದಲ್ಲಿ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಬಿ. ರಮೇಶ್ ರವರಿಗೆ 2026ನೇ ಸಾಲಿನ ಭಾರತರತ್ನ ಪಂಡಿತ್ ಭೀಮಸೇನ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರ ನೀಡಿ ಗೌರವಿಸಲಾಗಿದೆ. ಅಧ್ಯಯನ, ಅಧ್ಯಾಪನ, ಸಂಶೋಧನೆ ಮತ್ತು ಶೈಕ್ಷಣಿಕ ಆಡಳಿತ ಕ್ಷೇತ್ರದಲ್ಲಿ ಕಳೆದ 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಪ್ರೊ. ಬಿ. ರಮೇಶ್ ರವರು ಸಮಾಜ ಕಾರ್ಯ ರಂಗದಲ್ಲಿ ನೀಡಿರುವ ಮಹತ್ವದ ಕೊಡುಗೆಗಾಗಿ ಸ್ವದೇಶಿ ವಿಜ್ಞಾನ ಆಂದೋಲನದ ವತಿಯಿಂದ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

--ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಅನೇಕ ಆಡಳಿತಾತ್ಮಕ ಹುದ್ದೆಗಳಲ್ಲಿ ಪ್ರೊ. ರಮೇಶ್.ಬಿ. ಸಲ್ಲಿಸಿರುವ ಅತ್ಯುತ್ತಮ ಸೇವೆಯನ್ನು ಹಾಗೂ ಶೈಕ್ಷಣಿಕ ರಂಗದ ಪ್ರಗತಿಗೆ ಅವಿರತವಾಗಿ ನಡೆಸುತ್ತಿರುವ ಪರಿಶ್ರಮವನ್ನು ಪರಿಗಣಿಸಿ ಈ ಪುರಸ್ಕಾರವನ್ನು ನೀಡಲಾಗಿದೆ ಎಂದು ಪ್ರಶಸ್ತಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

## Ph.D Awardees


**Dr. Mary Josephine M**
Dept of Commerce
**Title:** A Study of Relationship Between CEO Qualities and Stock Performance of Select Bengaluru Based MNC"
**Guide:** Prof. M Muninarayanappa.


**Dr. Shravya Mouli**
**Centre for Global Languages**
**Title:** Exploration of the perception of the "Self" in a mother, as seen through historical narratives, literature, and visual media.
**Guide:** Prof. Jyothi Venkatesh


**Dr. Manoj Kumar .K**
Dept of Commerce
**Title:** "A study on educational learning outcome aligning towards the corporate sectors prospect with special reference to karnataka".
**Guide:** Prof. M Muninarayanappa.


**Dr. Sujatha Swamy**
**Centre for Global Languages.**
**Title:** A Comparison of the Role of the Head of State in the Context of the two Pandemics, the Spanish Flu of 1918 and COVID-19 of 2019
**Guide:** Prof. Jyothi Venkatesh

## To My College Mates

Dear friends let's grow in wisdom rise above the crowd,
See right from wrong with open minds be humble not too proud.
Don't judge too fast for everyone has value deep inside,
Respect and kindness be our guide, let empathy preside.

Marks are not the measure seek knowledge pure and vast,
Life's lessons reach beyond the books and let patience always last.
Our teachers are our shining stars inspiring day by day,
With their wisdom and their care they light our learning.

They share their lives, their truths, their hopes, though not all can be told,
They open up our minds and hearts with lessons bright and bold.
Be kind to all, respect the tools the chance we've been bestowed,
In this journey with guiding hands together we have grown.

**- SWATHI B ,** MA English(II Year)

**IMPORTANT NOTE**

Visit Dr Manmohan Singh Bengaluru City University's official website **www.bcu.ac.in** for regular updates of University activities and also read ANIKETANA. Send Reports/Photos to **E-mail id : aniketana@bcu.ac.in**


## Being Globally Connected



When missiles fill the skies over the Middle East, the fear does not stay there. In small towns across Karnataka, Kerala, Gujarat, Punjab, mothers sit by their phones waiting for a message, just one message from a son working a construction job in a Gulf country, or a daughter finishing her nursing shift near a conflict zone. The Israel-Iran war may feel like a distant geopolitical crisis to many, but for thousands of Indian families, it is the reason sleep does not come easily at night. Add to that the quietly rising prices of cooking gas, fuel, and groceries, the invisible tax that every conflict levies on the poor and the struggling and the war begins to feel very close to home. Behind every news bulletin and casualty figure is a human being with a family that loves them. Indian workers in the Middle East did not travel thousands of miles away from their children and aging parents for adventure. They went for dignity, for a better school for their child, for a father's medicine, for a modest dream. When conflict erupts around them, those dreams are suddenly fragile. Some return home with nothing but relief and empty pockets. Others wait it out, quietly afraid. The Israel-Iran conflict reminds us that in our deeply connected world, no war is ever truly someone else's war its weight is always carried in some form, by the most ordinary and innocent of people.

**-Navya H.M.**
M.A, Sociology (II Year)

# ಕಾಯಕ ಯೋಗಿ ಕರ್ನಾಟಕ ರತ್ನ



ಡಾ. ಶ್ರೀ ಶಿವಕುಮಾರ ಸ್ವಾಮೀಜಿ

'ನಡೆದಾಡುವ ದೇವರು', 'ಅಭಿನವ ಬಸವಣ್ಣ', 'ತ್ರಿವಿಧ ದಾಸೋಹಿ', 'ಕಾಯಕ ಯೋಗಿ' ಎಂದೆಲ್ಲಾ ಪ್ರಖ್ಯಾತರಾದ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರು ಈಗಿನ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದ ಬಡರೈತ ಕುಟುಂಬದಲ್ಲಿ 1907 ಏಪ್ರಿಲ್ 1ರಂದು ಜನಿಸಿದರು. ನಾಗವಲ್ಲಿಯ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪಡೆದ ಬಳಿಕ ಸ್ವಲ್ಪಕಾಲ ತುಮಕೂರು ಬಳಿಯ ಸಿದ್ದಗಂಗಾ ಮಠದಲ್ಲಿ ವಸತಿ ವಿದ್ಯಾರ್ಥಿಯಾಗಿದ್ದರು. 1927-1930 ಅವಧಿಯಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ ಆನರ್ಸ್ ವಿದ್ಯಾರ್ಥಿಯಾಗಿದ್ದ ಅವರು ಕಲಾ ವಿಷಯಗಳ ಜೊತೆಗೆ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರವನ್ನು ಅಭ್ಯಸಿಸಿದರು. ಅಷ್ಟರಲ್ಲಿ ಅವರಿಗೆ ಶ್ರೀಮಠದಿಂದ ಕರೆ ಬಂದು ಉದ್ದಾನ ಶಿವಯೋಗಿಗಳ ಉತ್ತರಾಧಿಕಾರಿಯಾಗಿ ವಿರಕ್ತಾಶ್ರಮ ಸ್ವೀಕರಿಸಿದರು. 1941ರಲ್ಲಿ ಮಠದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡ ಅವರು ಬಡಮಕ್ಕಳಿಗೆ ಜಾತಿ-ಮತ ಬೇಧವಿಲ್ಲದೆ ಆಶ್ರಯವಿತ್ತು ನಾಡಿನ ಲಕ್ಷಾಂತರ ಮನೆಗಳಿಗೆ ಬೆಳಕಾದರು. ಗುರುಕುಲ ಮಾದರಿಯ ಶ್ರೀಮಠದಲ್ಲೀಗ ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ ವ್ಯಾಪ್ತಿಯಲ್ಲಿ 132 ಶಾಲಾ-ಕಾಲೇಜುಗಳಿದ್ದು ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲಾಗುತ್ತಿದೆ. ಶ್ರೀಗಳಿಗೆ 'ಪದ್ಮಭೂಷಣ', 'ಕರ್ನಾಟಕ ರತ್ನ' ಪ್ರಶಸ್ತಿಗಳು ಸಂದಿದ್ದು ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿದೆ. ಶತಾಯುಷಿ ಶ್ರೀಗಳು 2019 ಜನವರಿ 21ರಂದು ತಮ್ಮ 111ನೇ ವಯಸ್ಸಿನಲ್ಲಿ ಲಿಂಗೈಕ್ಯರಾದರು.

# ಸೆಂಟ್ರಲ್ ಕಾಲೇಜ್ ಕ್ರೀಡಾ ಪರಂಪರೆ




**Photos above: G R Vishwanath(Left) , E A S Prasanna(Middle), B S Chandrashekhar(Right).**
**Central College Cricket Stadium Pavilion built in 1935 on the occasion of Daimond Jublee celcebration.**

ಸೆಂಟ್ರಲ್ ಕಾಲೇಜಿನ ಕ್ರೀಡಾ ಪರಂಪರೆ ಸುದೀರ್ಘ ಇತಿಹಾಸ ಹೊಂದಿದ್ದು 1935ರಲ್ಲಿ ಕಾಲೇಜಿನ ವಜ್ರಮಹೋತ್ಸವದ ಸಂದರ್ಭದಲ್ಲಿ ಕ್ರಿಕೆಟ್ ಪೆವಿಲಿಯನ್ ನಿರ್ಮಾಣವಾಯಿತು. ಮೈಸೂರು ಮತ್ತು ಅಣ್ಣಾಮಲೈ ವಿಶ್ವವಿದ್ಯಾಲಯ ತಂಡಗಳ ನಡುವೆ ಉದ್ಘಾಟನಾ ಪಂದ್ಯ ನಡೆಯಿತು. 1941ರಿಂದ 1972ರ ನಡುವೆ ಚಿನ್ನಸ್ವಾಮಿ ಕ್ರೀಡಾಂಗಣ ಸಿದ್ಧವಾಗುವವರೆಗೂ ಈ ಮೈದಾನದಲ್ಲಿ 52 ಪ್ರಥಮ ದರ್ಜೆ ಪಂದ್ಯಗಳು ನಡೆದಿವೆ. ರಣಜಿ ಟ್ರೋಫಿ, ದುಲೀಪ್ ಟ್ರೋಫಿ ಜೊತೆಗೆ ಅಂತರ ವಿಶ್ವವಿದ್ಯಾಲಯ ಮಟ್ಟದ ನೂರಾರು ಪಂದ್ಯಗಳಿಗೆ ಈ ಮೈದಾನ ಸಾಕ್ಷಿಯಾಗಿದ್ದು ಅಂತಾರಾಷ್ಟ್ರೀಯ ಖ್ಯಾತಿಯ ಗ್ಯಾರಿ ಸೋಬರ್ಸ್, ನೀಲ್ ಹಾರ್ವೆ ಹಾಗೂ ಭಾರತೀಯ ದಿಗ್ಗಜರಾದ ಜಿ. ಕಸ್ತೂರಿರಂಗನ್, ಜಿ.ಆರ್.ವಿಶ್ವನಾಥ್, ಇಎಎಸ್ ಪ್ರಸನ್ನ, ಬಿಎಸ್ ಚಂದ್ರಶೇಖರ್, ಸಯ್ಯದ್ ಕಿರ್ಮಾನಿ, ಬ್ರಿಜೇಶ್ ಪಟೇಲ್, ರೋಜರ್ ಬಿನ್ನಿ ಮುಂತಾದ ಆಟಗಾರರು ಈ ಮೈದಾನದಲ್ಲಿ ತಮ್ಮ ಪ್ರೌಢಿಮೆ ಮೆರೆದಿರುವರು. ಡಾ.ಕೆ.ತಿಮ್ಮಪ್ಪಯ್ಯ ಈ ಮೈದಾನದಲ್ಲಿ ಪ್ರಪ್ರಥಮ ಶತಕ ಬಾರಿಸಿದ ಮೊದಲಿಗರೆಂಬ ಹೆಗ್ಗಳಿಕೆಗೆ ಪಾತ್ರರಾಗಿರುವರು. ಅನೇಕ ವಿದೇಶಿ ತಂಡಗಳೂ ಈ ಮೈದಾನದಲ್ಲಿ ಪ್ರದರ್ಶನ ನೀಡಿದ್ದು ಸಾವಿರಾರು ಸಂಖ್ಯೆಯಲ್ಲಿ ಕಿಕ್ಕಿರಿದು ತುಂಬಿರುತ್ತಿದ್ದ ಪ್ರೇಕ್ಷಕರನ್ನು ಕ್ರಿಕೆಟ್ ಕಲಿಗಳು ರಂಜಿಸಿರುವರು. ಅಂದಿನ ಮೈಸೂರು ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರ ನೆರವಿನಿಂದ ಸೆಂಟ್ರಲ್ ಜೈಲಿಗೆ ಮಂಜೂರಾದ ಭೂಮಿಯ ಸುಮಾರು 12 ಎಕರೆ ಪ್ರದೇಶ ಸೆಂಟ್ರಲ್ ಕಾಲೇಜಿಗೆ ಲಭ್ಯವಾಗಿದ್ದು ಕ್ರೀಡಾ ಚಟುವಟಿಕೆಗಳಿಗೆ ಅಪಾರ ಉತ್ತೇಜನ ದೊರಕಿಸಿತು. ಮೈಸೂರು ಕ್ರಿಕೆಟ್ ಅಸೋಸಿಯೇಷನ್‌ನ ಮೂಲಸ್ಥಾನವಾಗಿದ್ದ ಈ ತಾಣ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನ (ಕೆ-ಎಸ್‌ಸಿಎ) ತವರು ನೆಲವಾಗಿದೆ. 2002ರಲ್ಲಿ ಈ ಮೈದಾನದಲ್ಲಿ 'ಲಿಸ್ಟ್ ಎ' ಪಂದ್ಯಗಳು ನಡೆದಿದ್ದು 2012-13 ನೇ ಸಾಲಿನಲ್ಲಿ ಕೊನೆಯ ಪಂದ್ಯ ಏರ್ಪಟ್ಟಿತ್ತು. ಕರ್ನಾಟಕ ರಾಜ್ಯದಲ್ಲಿ ಕ್ರಿಕೆಟ್ ಕ್ರೀಡೆಯ ಪ್ರಗತಿಗೆ ಸೆಂಟ್ರಲ್ ಕಾಲೇಜ್ ಮೈದಾನದ ಕೊಡುಗೆ ಮಹತ್ವದ್ದಾಗಿದೆ.

ಅಂದಿನ ಪ್ರಿನ್ಸಿಪಾಲ್ ಜೆ.ಜಿ. ಟೈಟ್‌ರವರು ಸೆಂಟ್ರಲ್ ಕಾಲೇಜ್‌ನ ಕ್ರೀಡಾ ಪರಂಪರೆಗೆ ಭದ್ರ ಬುನಾದಿ ಹಾಕಿದರು. 1888ರಲ್ಲಿ ಟೆನ್ನಿಸ್ ಕ್ರೀಡೆಯಲ್ಲಿ ಪ್ರಥಮ ಟ್ರೋಫಿ ಗಳಿಸುವುದರೊಂದಿಗೆ ವಿಜಯದ ಕಹಳೆ ಮೊಳಗಿಸಿದ ಸೆಂಟ್ರಲ್ ಕಾಲೇಜ್‌ನ ಕ್ರೀಡಾಪಟುಗಳು ಕ್ರಿಕೆಟ್ ಹಾಗೂ ಟೆನ್ನಿಸ್ ಎರಡರಲ್ಲೂ ಪಾರಮ್ಯತೆ ಮೆರೆದಿದ್ದರು. ಹಾಕಿ, ಫುಟ್ ಬಾಲ್, ಬ್ಯಾಸ್ಕೆಟ್ ಬಾಲ್, ವಾಲಿ ಬಾಲ್, ಕಬಡ್ಡಿ, ಖೋಖೋ, ಬ್ಯಾಡ್ಮಿಂಟನ್, ಜಿಮ್ನಾಸ್ಟಿಕ್ಸ್, ಅಥ್ಲೆಟಿಕ್ಸ್, ಕುಸ್ತಿ, ಈಜು, ಮುಂತಾದ ಕ್ರೀಡೆಗಳಲ್ಲೂ ಸೆಂಟ್ರಲ್ ಕಾಲೇಜ್ ಮೇಲುಗೈ ಸಾಧಿಸಿದ್ದವು.

**-ಡಾ. ಪುರುಷೋತ್ತಮ್**
ಉಪನ್ಯಾಸಕರು, ಇತಿಹಾಸ ವಿಭಾಗ


**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಪ್. ಎ**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ್.ಬಿ. ಕುಡೇನಟ್ಟಿ**
ಕುಲಸಚಿವರು-ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ**
ಡೀನರು, ವಾಣಿಜ್ಯ ನಿಕಾಯ.
**ಪ್ರೊ. ಜ್ಯೋತಿ ವೆಂಕಟೇಶ್**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ**
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

**ನವ್ಯಾ**, ಎಂಸಿಜೆ, ದ್ವಿತೀಯ
**ರಂಜಿತ್**, ಎಂಸಿಜೆ, ಪ್ರಥಮ
**ಬಿಂದುಶ್ರೀ**, ಎಂಸಿಜೆ, ದ್ವಿತೀಯ


## ತಿಂಗಳ ಬುತ್ತಿ

**ಏಪ್ರಿಲ್ 4:**
ಡಾ.ಎಂಎಸ್‌ಬಿಸಿಯು ಐದನೇ ವಾರ್ಷಿಕ ಘಟಿಕೋತ್ಸವ
**ಏಪ್ರಿಲ್ 14:**
ಡಾ. ಬಿ.ಆರ್ ಅಂಬೇಡ್ಕರ್ ಜಯಂತಿ
**ಏಪ್ರಿಲ್ 20:**ಬಸವೇಶ್ವರ ಜಯಂತಿ
**ಏಪ್ರಿಲ್ 24,25,26:**
ಕರ್ನಾಟಕ ಹಿಸ್ಟರಿ ಕಾಂಗ್ರೆಸ್.

# BUDDHISM ON JAPANESE SHORES

Lord Buddha, "The Enlightened One" is a name synonymous with peace and compassion and his teachings resonate with human values that need to be imbibed by every individual to end suffering in this world through the Four Noble Truths and the Eightfold Path. Born as Siddhartha in the 6th century BCE in Lumbini , Nepal, he attained salvation at the Bodh Gaya , Bihar in India. He had rejected all worldly materialistic pleasures and as a wandering ascetic, he preached in the north–east of India. Did you ever wonder how his teachings reached the faraway shores of Japan and how Buddhism became one of the most important religions in Japan today? Did Lord Buddha travel to Japan and preach Buddhism? No, Lord Buddha did not travel to Japan to propagate his teachings but his monks spread his teachings through the silk route and then reached Japan. His teachings captivated large populations of China and Korea and soon reached Japan. The Korean King Seong of Baekje offered Buddhist scriptures and images to Japan in 552CE marking the advent of Buddhism in Japan. Prince Shotoku of the Soga Clan, one of the most powerful ruling clans in Japan adopted the teachings of Lord Buddha. He built temples, introduced Buddhist studies and integrated the principles into government policies and soon it became the state religion. People started practising Buddhism along with the Shinto beliefs. Buddhism was then widely approved by the rulers of the Nara period. Various dynasties have promoted Buddhism over the centuries and today, the Japanese religious landscape is equally influenced by both the Shinto and Buddhist traditions. Buddhism is currently, followed by 46 to 70 % of the population in Japan. Majority of Japanese citizens participate in rituals from both religions, the Shinto and the Buddhist, even today.

**-CHANDAN H. D**
Japanese Lecturer
CGL, DrMSBCU
Edited by-Dr. S Krishnan.

# Abidhamma :The Need of the Hour for Young Students

Dr Manmohan Singh Bengaluru City University, Dr. B. R. Ambedkar Study Centre, organized a Special Academic Dhamma Talk titled "Understanding Student Life – An Analytical Reflection," as part of its commitment to fostering ethical and philosophical engagement among students and faculty.

In her keynote address, Venerable Àcariya Sujin Boriharnwanaket offered a lucid exposition of Dhamma, emphasizing its relevance to everyday life and underscoring the importance of mindful awareness in each moment of seeing and hearing as a pathway to realizing truth. She observed that the contemporary education system, driven by deadlines and performance metrics, often engenders stress and material preoccupations, thereby distancing individuals from inner peace.

In this context, she argued that adherence to Dhamma enables individuals to harmonize their worldly responsibilities with a balanced and reflective life. Drawing upon insights from Abhidhamma philosophy, she encouraged students to cultivate contemplative awareness and critical reflection. Addressing the gathering, Prof. Ramesh B, Vice-Chancellor of the University, remarked that the study of Abhidhamma is particularly pertinent for the younger generation and academic community, as it nurtures scientific temper, ethical sensibility, and compassion toward all living beings. Prof. Jalaja. K.R, Director of Ambedkar Study Centre, was present at the event. The programme commenced with an invocation and welcome address by Ms. Vani Shree, Faculty of Social Work, who also proposed the vote of thanks.




Abhidhamma : Special talk at Jnana Jyothi Auditorium seminar hall

**-Vanishree,Dept.of MSW**

# ಬಯಲ ಅರಮನೆ

ಗದ್ದುಗೆಯಿಲ್ಲ, ಗದ್ದಲವಿಲ್ಲ
ಸದ್ದಿಲ್ಲದೆ ಸಾಗಿದೆ ಶಾಂತ
ಸಾಗರದೆಡೆಗೆ
ನಿರುಮ್ಮಳವಾಗಿ ನೀ ನಡೆದುಬಿಟ್ಟೆ
ನಿರ್ದಿಗಂತದೆಡೆಗೆ

ಅರಮನೆ, ಗುರುಮನೆ
ಸೆರೆಮನೆಯಾಗಿರಲು
ಸಂಬಂಧಗಳ ಜಾಲದ
ಜಟಿಲತೆಯ ತೊರೆದು
ಸಾಗಿದೆ ಬಲುದೂರ ನೀ ಬಯಲ
ಅರಮನೆಗೆ

ಮಡದಿ ಮಕ್ಕಳ ಮೋಹ
ಕಾಡದಂತೆ
ಗುರಿಹಿಡಿದ ಜಾಡು ತಲುಪುವಂತೆ
ಬೋಧಿವೃಕ್ಷದಡಿ ನೀ ಪಡೆದೆ
ಜ್ಞಾನದರ್ಶನವ

ಜಗದ ಸಾಸಿರ ನೋವ ಕಂಡು
ಮರುಗಿದೆ
ಸಾಸಿವೆಯ ಸುಖಕೆ, ಸಾಗರದಷ್ಟು
ದುಃಖಪಟ್ಟವರ ಕಂಡು
ಸಾವಿಲ್ಲದ ಮನೆಯ ಸಾಸಿವೆಯ
ತರಲು ನೀ ಹೇಳಿದೆ

ಕೊನೆಯಿರದ ಆಸೆ, ದುಃಖಾಂತದ
ಸಾಲು ಬಂಡಿಗಳಿಗೆ
ನೀ ತೋರಿದೆ ನಿಷ್ಕಾಮ ಮರ್ಮದ
ದಾರಿಯನು
ಭಾರತದ ಮಣ್ಣಿನಲಿ ಅರಳಿ ನೀ
ಗೆದ್ದುಬಿಟ್ಟೆ ವಿಶ್ವದಹೃದಯವ

**– ಡಾ. ಗೋಪಿ.ಎಸ್.ಎಂ**
ಕನ್ನಡ ವಿಭಾಗ

**Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001**